ಲೇಖನ 04

# ಕೊಡವರ ಕೈಲ್‌ಪೋಡ್ ಹಬ್ಬದ ಥೋಕ್ ಪೂ ಅಗ್ನಿಶಿಖೆ

“ಅರಣ್ಯಕದ ಪುಷ್ಪಗಳ ಮೂಸುವವರಾರು?, ಆರಿಹರು ಪತಂಗದುಡುಪನು ಹುಡುಕಿ ಮೆಚ್ಚಲ್?, ಬೇರೊಬ್ಬರೆಣಿಕೆಯಿಲ್ಲದೇ ಪ್ರಕೃತಿ ತನಗೆಂದೆ ಸ್ವಾರಸ್ಯವೆಸಗುವಳೋ-ಮಂಕುತಿಮ್ಮ" ಕಾನನದಲ್ಲಿ ಅರಳುವ ಪುಷ್ಪಗಳನ್ನೆಲ್ಲವ ಆಸ್ವಾದಿಸುವವರು ಯಾರು. ಬಣ್ಣ ಬಣ್ಣದ ಚಿಟ್ಟೆಯ ಹಾರಾಟ ಕಣ್ತುಂಬಿಕೊಳ್ಳುವವರು ಯಾರಿಲ್ಲ. ಪ್ರಕೃತಿಯಲಿ ಅನೇಕ ಸ್ವಾರಸ್ಯಗಳಿರುತ್ತದೆ. ಅದು ಯಾರಿಗೋ ಸಂತಸ ಪಡಿಸುವದಕ್ಕಲ್ಲ ಬದಲಾಗಿ ಪ್ರಕೃತಿಯು ತನ್ನ ನಿರಂತರ ಕಾಯಕ ಮಾಡುತ್ತಾ ಲೋಕಕ್ಕೆ ಬೇಕಾದುದನ್ನು ಸದಾ ನೀಡುತ್ತಿರುತ್ತದೆ. ಪ್ರಕೃತಿ ಎಂದೂ ತಾನು ಮಾಡುವದನ್ನು ಹೇಳದೇ ನಿರಂತರ ಪರೋಪಕಾರಕ್ಕಾಗಿಯೇ ಜೀವಿಸುತ್ತದೆ. ಆದರೆ ಕಾನಿನಲಿ ಮನೆಯೊಂದ ಕಟ್ಟಿ ನೂರಾರು ಜನರಿಗೆ ಪಾಠ ಕಲಿಸಿದೆ, ಸಾವಿರಾರು ಗಿಡ ಬೆಳೆದೆ ಎನ್ನುತ್ತಾ ಹಣಗಳಿಸುವ ಮನುಜರಿಗೆ ಪ್ರಕೃತಿಯೇ ಒಂದು ಪಾಠ.



ಚಿತ್ರ ಕೃಪೆ: ಡಾ. ಶ್ರೀಕಾಂತ್ ಗುಣಗಾ

ವೈವಿಧ್ಯಮಯ ಜೀವವೈವಿಧ್ಯ ಸೃಷ್ಟಿ ಪ್ರಕೃತಿಯಿಂದಲೆ ಹೊರತು ಮಾನವರಿಂದ ಅಸಾಧ್ಯ ಎನ್ನುವದು ತಾತ್ಪರ್ಯ.ಕಾನನದ ಹೂವು ನೀನು, ಹಲವಾಗಿ ಹೂವಾಗಿ ಅರಳಿ ನಿಂತಿರುವೆ, ಭಿನ್ನ ಭಿನ್ನ ಬಣ್ಣಗಳಲಿ ಮಿಂದೆದ್ದು ನೀ, ಪರಿಪರಿಯ ಪರಿಮಳವ ಸೂಸುತಿರುವ ಕಾಡಿನ ಕುಸುಮಗಳಲ್ಲಿ ಸೌಂದರ್ಯದ ಹೂವು ಅಗ್ನಿಶಿಖೆ. ಭಾದ್ರಪದ ಶುಕ್ಲದಿ ಧರೆಗಿಳಿವ ಗೌರಿಮಾತೆಯ ಅರ್ಚನೆಯ ಗೌರಿ ಹೂವು. ಆಫ್ರಿಕಾ ಖಂಡದ ದೇಶವೊಂದರ ರಾಷ್ಟ್ರೀಯಪುಷ್ಪ. ದಕ್ಷಿಣದ ರಾಜ್ಯವೊಂದರ ರಾಜ್ಯ ಪುಷ್ಪವೂ ಆಗಿದೆ ಲಾಂಗಲಿ. ಸಪ್ತಋಷಿಗಳ ಅರ್ಚನೆಗಾಗಿ ಇಲಿ(ಋಷಿ)ಪಂಚಮಿಯಂದು ತರುವ ಕೋಳಿಕುಕುಮನಗಡ್ಡೆಯ ಪುಷ್ಪ. ಕೊಡಗಿನ ಕೃಷಿ ಆಚರಣೆ ಕೈಲ್ ಪೋಡ್ ಹಬ್ಬದಂದು ಕೋವಿ ನಳಿಗೆಗೆ ಇಟ್ಟು ಪೂಜಿಸುವ ಥೋಕ್ ಪೂ ಅಗ್ನಿಶಿಖೆ.

ಕರ್ನಾಟಕದ ಕೇತನದ ವರ್ಣದಂತೆ ಹೊಳೆಯುವ ಅಗ್ನಿಶಿಖೆ ಹೂವಿಗೆ ಭಾರತ, ಮ್ಯಾನ್ಮಾರ್, ಶ್ರೀಲಂಕಾ, ಮಲೇಶಿಯಾವೇ ತವರೂರು. ಜಿಂಬಾವ್ವೆಯಂತು ತನ್ನ ದೇಶದ ಹೂವೆಂದು ಮಡಿಲಲಿ ತುಂಬಿಸಿಕೊಂಡಿದೆ. ಈ ಹೂವಿನ ಕುಲ ಕುಟುಂಬ ಜಾತಕ ಅರಿಯೋಣ. ಲಿಲಿಯೇಸಿ ಸಸ್ಯ ಕುಟುಂಬದ ಸದಸ್ಯನಾಗಿರುವ ಇದರ ವೈಜ್ಞಾನಿಕ ಹೆಸರು ಗ್ಲೋರಿಯೋಸಾ ಸುಪರ್ಬಾ.

ಅಕ್ಕತಂಗಿ ಬಳ್ಳಿ, ಅಗ್ನಿಶಿಖಾ, ಹುಲಿಯುಗುರು ಬಳ್ಳಿ, ವನಹಾವು, ಬಲಿಪಾಪು, ಶಿವಶಕ್ತಿಬಳ್ಳಿ ಕೋಳಿಕುಟುಮನ ಗಡ್ಡೆ, ಕರಡಿಕಣ್ಣಿನ ಗಡ್ಡೆ, ಗೌರಿಹೂವು, ಲಾಂಗುಲಿಕ ಎಂಬುದು ಕನ್ನಡದ ನಾಮಾವಳಿಗಳು. ಹಿಂದಿಯಲ್ಲಿ ಕಲಿಹಾರಿ, ಲಾಂಗುಲು, ತಮಿಳಿನಲ್ಲಿ ಕಾರ್ತಿಗೈಪೂ, ಅಕ್ಕನೀಚಲಂ, ತೆಲುಗಿನಲ್ಲಿ ಕಾಲಪ್ಪಗಡ್ಡ, ಇಂಗ್ಲಿಷಿನಲ್ಲಿ ಕ್ಲೈಬಿಂಗ್ ಲಿಲ್ಲಿ, ಸುಪರ್ಬಗ್ಲೋರಿ, ಹೂವುಗಳು ಅಗ್ನಿಯ ಜ್ವಾಲೆಯಂತೆ ಭಾಸವಾಗುವದರಿಂದ ಅಗ್ನಿಮುಖಿ, ವಹ್ನಿಜಿಹ್ವಾ, ಅಗ್ನಿಶಿಖೆಯೆಂದು, ಇದರ ಗಡ್ಡೆಯು ಗರ್ಭಪಾತ ಮಾಡಿಸುವದರಿಂದ ಗರ್ಭಪಾತಿನಿಯೆಂದು, ಗಿಡದ ಗಡ್ಡೆಯು ನೇಗಿಲಿನ ಆಕಾರದಲ್ಲಿರುತ್ತವೆ ಅದಕ್ಕೆ ಹಲಿನಿಯೆಂದು ಲಾಂಗುಲಿ, ಶುಕ್ರಪುಷ್ಟಿಕಾ ಎಂಬುದು ಸಂಸ್ಕೃತ ಭಾಷೆಯ ನಾಮಗಳು.

ಗದ್ದೆನಾಟಿ ಮುಗಿದು ಪೈರು ಬೆಳೆಯುವ ಹೊಸಿಲಿನಲ್ಲಿ ಕೈಲಪೋಡ್ ಎಂಬುದು ಕೊಡಗಿನ ಕೊಡವ ಸಮುದಾಯ ಆಚರಿಸುವ ವಿಶಿಷ್ಠ ಸಾಂಪ್ರದಾಯಿಕ ಜನಪದ ಹಬ್ಬವಾಗಿದೆ. ಕೊಡವರು ತಮ್ಮ ಪೂರ್ವಜರನ್ನು ಮತ್ತು ಬೇಟೆಯ ದೇವತೆ (ಪ್ರಕೃತಿಯ ಶಕ್ತಿ) ಯನ್ನು ಗೌರವಿಸಲು ಆಚರಿಸುವ ಹಬ್ಬವಿದು. ಕೃಷಿಕಾರ್ಯ ಅಂತ್ಯದ ವೇಳೆ ಬೇಟೆಯಾಡುವ ಸಿದ್ಧತೆಗಾಗಿ ಅಂದು ಎಲ್ಲ ಆಯುಧಗಳನ್ನು ಪೂಜಿಸುವ ಕ್ರಮವಿದೆ. ಬಂದೂಕಗಳ(ಥೋಕ್) ನಳಿಕೆಯ ಮೇಲೆ ಅಗ್ನಿ ಶಿಖೆಯ ಹೂವಿನಿಂದ ಅಲಂಕರಿಸುತ್ತಾರೆ. ಆ ಕಾರಣಕ್ಕಾಗಿ ಥೋಕ ಪೂ ಎನ್ನುವರು ಎಂದು ಹೇಳಿದವರು ಮಡಿಕೇರಿಯ ಪರಿಸರ ತಜ್ಞ ಶಿವಕುಮಾರ ಚುಕ್ಕೆಮನೆ. ನಮ್ಮ ನೆರೆಯ ರಾಜ್ಯ ತಮಿಳುನಾಡಿನ ರಾಜ್ಯ ಪುಷ್ಪ ಅಗ್ನಿಶಿಖೆ ನವೆಂಬರ ಅಂದರೆ ಕಾರ್ತಿಕ ಮಾಸದದಲ್ಲಿ ಅರಳುವದರಿಂದ ಕಾರ್ತೀಗೈಪೂ ಎಂದು ಕರೆಯಲಾಗುತ್ತದೆ.

ಸ್ಥಳೀಯ ಧಾರ್ಮಿಕ ಆಚರಣೆಗಳಲ್ಲಿ ಈ ಹೂವು ಸ್ಥಾನ ಪಡೆದಿದೆ. ಹೂವಿನ ದಳಗಳು ಬೆಂಕಿಯಂತೆ ಭಾಸವಾಗುವದು, ನರ್ತಿಸುವ ದೇವರು ಶಿವನ ಜೊತೆ ಇರುವ ಹೆಡೆ ಬಿಚ್ಚಿದ ನಾಗರ ಹಾವಿನಂತೆ ಎಂದು ತಮಿಳು ಸಂಘಂ ಸಾಹಿತ್ಯ ವರ್ಣಿಸುತ್ತದೆ.



ಚಿತ್ರ ಕೃಪೆ: ವಿನಾಯಕ S

ತಮಿಳು ಈಳಂನ ಧ್ವಜದ ವರ್ಣ ಒಳಗೊಂಡಿರುವ ಕಾರಣ ತಮಿಳು ಈಳಂನ ರಾಷ್ಟ್ರೀಯ ಹೂವು ಎಂದು ಆಯ್ಕೆ ಮಾಡಲಾಗಿದೆ. ತಮಿಳು ಈಳಂಗಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ವೀರರನ್ನು ಗೌರವಿಸಲು ಬಳಸಲಾಗುತ್ತದೆ. ಈ ಅಗ್ನಿಶಿಖೆ ಗಿಡವನ್ನು ರಾಷ್ಟ್ರೀಯ ಕಾರ್ಯಕ್ರಮ ಸಂದರ್ಭದಲ್ಲಿ ಉಪಯೋಗಿಸುವಂತೆ ಪ್ರೋತ್ಸಾಹಿಸಲು ಖಾಸಗಿ ಮನೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಬೆಳೆಯುವಂತೆ ಮಾಡಲಾಗಿದೆ. ಛತ್ತಿಸ್‌ಘಡ್ ಪ್ರಾಂತದಲ್ಲಿ ಹೊಸ ಸಾಂಪ್ರದಾಯಿಕ ವೈದ್ಯ ದೀಕ್ಷಾ ಸಮಾರಂಭವು ಶ್ರಾವಣ ಅಮವಾಸ್ಯೆಯಂದು ಪ್ರಾರಂಭವಾಗುತ್ತದೆ. ಋಷಿ ಪಂಚಮಿಯಂದು ಅಗ್ನಿಶಿಖೆ ಗಡ್ಡೆಯನ್ನು ತಂದು ಪೂಜಿಸಿ ಗ್ರಾಮಸ್ಥರ ಮುಂದೆ ಅದನ್ನು ಅಗಿದು ತಿಂದು ಪಾಂಡಿತ್ಯ ಪ್ರದರ್ಶಿಸಿ ಪಾರಂಪರಿಕ ವೈದ್ಯ ದೀಕ್ಷೆ ತೆಗೆದುಕೊಳ್ಳುವ ಪದ್ಧತಿಯಿದೆ.

ಗೌರಿದೇವಿಗೂ ಹೂವಿಗೂ ನಿಕಟ ಸಂಬಂಧವಿದೆ ಪ್ರತಿವರುಷವೂ ಗೌರಿ ಹಬ್ಬದಂದು ಗಿಡ ಸಮೇತ ತಂದು ಫಲಾವಳಿಯಂತೆ ಮಂಟಪದಲ್ಲಿ ಕಟ್ಟುತ್ತಾರೆ. ನೈಜಿರಿಯಾದಲ್ಲಿ ಬಾಣದ ವಿಷದಿಂದ ಹಿಡಿದು ಗರ್ಭಪಾತ ನಿವಾರಕವಾಗಿಯೂ ಬಳಸುವ ಜ್ಞಾನವನ್ನು ಸ್ಥಳಿಯರು ಹೊಂದಿರುತ್ತಾರೆ. ಜಿಂಬಾಬ್ವೇ ದೇಶದ ರಾಷ್ಟ್ರೀಯ ಪುಷ್ಪವಾಗಿದೆ. ಅಗ್ನಿಶಿಖೆ ಹೂವನ್ನು ಪುನರ್ಜನ್ಮ ಸಂಕೇತವಾಗಿ ಕಾಣುತ್ತಾರೆ. ಹೂವು ಚೈತನ್ಯಶಾಲಿ ಮತ್ತು ಬಲಶಾಲಿಯ ಸಂಕೇತ ಎಂದು ಭಾವಿಸುತ್ತಾರೆ. ಪರವಾನಗಿ ಇಲ್ಲದೇ ಕಾಡಿನಲ್ಲಿ ಸಸ್ಯ ಕೀಳುವದು ವ್ಯಾಪಾರ ಮಾಡುವದು ಕಾನೂನು ಬಾಹಿರ ಎಂಬ ನಿಯಮ ಜಿಂಬಾಬ್ವೆಯಲ್ಲಿದೆ. ಅಲ್ಲಿನ ಕೆಲವು ಮಾಂತ್ರಿಕ ಆಚರಣೆಯಲ್ಲೂ ಉಪಯೋಗಿಸುತ್ತಾರೆ. 1947 ರಲ್ಲಿ ರಾಣಿ ಎಲಿಜಿಬೆತ್ 11 ಅವರು ಆಗಿನ ರೋಡೆಶಿಯಾಕ್ಕೆ ಭೇಟಿ ನೀಡಿದಾಗ ಅಗ್ನಿಶಿಖೆ ಹೂವಿನ ಆಕಾರದ ವಜ್ರದ ಬ್ರೂಚ್ ಅನ್ನು ಸ್ವೀಕರಿಸಿದರು. ಧಾರ್ಮಿಕ ಸಮಾರಂಭಗಳು ಮತ್ತು ಹಬ್ಬಗಳಲ್ಲಿ ಹೂವನ್ನು ಬಳಕೆ ಮಾಡುವದರಿಂದ ಸಮೃದ್ಧಿ ಮತ್ತು ಅದೃಷ್ಟ ನೀಡುತ್ತದೆ ಎಂಬ ನಂಬಿಕೆಯಿದೆ. ಮಹಾರಾಷ್ಟ್ರದ ನಂದೂರ್ಭಾರ ಜಿಲ್ಲೆಯ ಕೆಲವು ಬುಡಕಟ್ಟು ಜನಾಂಗದಲಿ, ಅಗ್ನಿಶಿಖೆ ಹೂವನ್ನು ನೆರೆಮನೆ ಮನೆಯ ಮೇಲೆ ಎಸೆದರೆ ಅವರ ಕುಟುಂಬದಲ್ಲಿ ಮೂರು ದಿನದಲ್ಲಿ ಪರಸ್ಪರ ಜಗಳ ಉಂಟಾಗುವದು ಒಂದು ವಿಚಿತ್ರ ನಂಬಿಕೆ. ಮಕ್ಕಳು ತಮಾಷೆಯಾಗಿ ಪರಸ್ಪರ ಮನೆಗಳ ಮೇಲೆ ಹೂವುಗಳನ್ನು ಎಸೆಯಲು ಕಾರಣವಾಯಿತು.

ನಿತ್ಯಹರಿದ್ವರ್ಣ ಸಸ್ಯಾವರಣದ ಪೊದೆಗಳ ಮಧ್ಯೆ ಹಬ್ಬಿ ಬೆಳೆಯುವ ಕರಡಿಕಣ್ಣಿನ ಗಿಡವನ್ನು ಅಲಂಕಾರಿಕ ಗಿಡವಾಗಿಯೂ ಉದ್ಯಾನಗಳಲ್ಲಿ ಬೆಳೆಸಬಹುದಾಗಿದೆ. ಸಂಪ್ರದಾಯದಲ್ಲಿನ ಬಳಕೆಯಂತೆ ಮನುಜರ ಕಾಯಿಲೆಗಳನ್ನು ವಾಸಿಮಾಡಬಲ್ಲ ಉತ್ತಮ ವನಸ್ಪತಿಯಾಗಿದೆ. ಹಾವು ಚೇಳು ವಿಷಕೀಟಗಳು ಕಡಿದರೆ ಗಡ್ಡೆಯಿಂದ ಮದ್ದು ಮಾಡುವ ಕ್ರಮವಿದೆ. ಗೊನೊರಿಯಾ, ಕುಷ್ಠ, ಮೂಲವ್ಯಾಧಿ, ತಲೆಯ ಹೇನು ನಿವಾರಣೆಗೆ, ಚರ್ಮವ್ಯಾದಿಗಳು ಶಮನವಾಗುತ್ತವೆ. ಎಲೆ, ಗಡ್ಡೆ ಔಷಧಿಯ ಭಾಗಗಳಾಗಿದೆ. ಪಶುಗಳ ಜಂತು ರೋಗ ಮತ್ತು ಕಿರುಬ ಗುರ್ಕೆಯಂತ ಪ್ರಾಣಿಗಳು ಹಸುಗಳಿಗೆ ಕಡಿದಾಗಲೂ ಗಡ್ಡೆಯನ್ನು ಔಷಧವಾಗಿ ಬಳಸಬಹುದೆಂಬ ಉಲ್ಲೇಖ ಡಾ. ಮಾಗಡಿ ಆರ್ ಗುರುದೇವರ ಗ್ರಂಥದಲ್ಲಿದೆ. ಇದರ ಗಡ್ಡೆಯನ್ನು ಶುದ್ಧೀಕರಣ ಮಾಡದ ಹೊರತು ಔಷಧ ತಯಾರಿಕೆಗೆ ಉಪಯೋಗಿಸಬಾರದೆಂಬ ನಿಯಮ ಪಾಲಿಸಲೇಬೇಕು.



ಚಿತ್ರ ಕೃಪೆ: ಪ್ರಕಾಶ್ ಜೈಹಿಂದ್

ಕಲಾಕೂಟ ರಸ, ಬ್ರಹತ್ ಮರಿಚಾದಿ ತೈಲ, ಚಿತ್ರಕಾದಿ ತೈಲ ಇವು ಅಗ್ನಿ ಶಿಖೆಯುಕ್ತ ಆಯುರ್ವೇದ ಔಷಧಗಳು.

"ತಿಲತೈಳದೊಳುತ್ತರಣೆಯ ಫಳಮಂ ಮೇಣ್ ಲೊಕ್ಕಿಯರ್ಕಬೀಜಮುಮಂ ಲಾಂಗಳಿಯೆಂಬಿವ ನಟ್ಟೋಂದಿರೆ ವಿಳೇಪನಗೆಯ್ಯೆ ತಲೆಯ ಪುಣ್ಗಳ್ ಕಿಡುಗುಂ" ಉತ್ರಣೆಯ ಬೀಜವನ್ನು ಎಳ್ಳಣ್ಣೆಯಲ್ಲಿ ಅರೆದು ಹಚ್ಚುವದು, ಶುಂಠಿ ಲಕ್ಕಿಯ ಬೀಜ ಎಕ್ಕೆಯ ಬೀಜ ಅಗ್ನಿಶಿಖೆಯ ಗಡ್ಡೆಯನ್ನು ನೀರಲ್ಲಿ ಅರೆದು ಎಣ್ಣೆಯಲ್ಲಿ ಕುದಿಸಿ ತಲೆಗೆ ಹಚ್ಚಿದರೆ ತಲೆಯ ಹುಣ್ಣು ಕಡಿಮೆಯಾಗುವವು ಇದು ಚಾಮುಂಡರಾಯ ಬರೆದ ಲೋಕೋಪಕಾರಂ ಗ್ರಂಥದಲ್ಲಿ ಲಿಖಿತವಾಗಿದೆ.

ಅಗ್ನಿಶಿಖೆಯು ಕೇವಲ ಒಂದು ಹೂವಾಗಿರದೇ ಪ್ರಕೃತಿಯ ಅದ್ಭುತ ಸೃಷ್ಟಿಯಾಗಿದೆ. ತನ್ನ ಬಣ್ಣ ವಿಶಿಷ್ಟ ಆಕಾರ ಮತ್ತು ಔಷಧಿಯ ಗುಣಗಳಿಂದ ಸಸ್ಯಲೋಕದಲ್ಲಿ ವಿಶೇಷ ಸ್ಥಾನಮಾನ ಪಡೆದಿದೆ. ಅನೇಕ ಸಂಸ್ಕೃತಿಗಳಲ್ಲೂ, ಧಾರ್ಮಿಕ ಆಚರಣೆಗಳಲ್ಲೂ ಮಹತ್ವವನ್ನು ಪಡೆದಿದೆ. ಸುಸ್ಥಿರ ಕೃಷಿಯಿಂದ ರೈತರಿಗೆ ಆರ್ಥಿಕತೆಯ ಲಾಭವನ್ನು ತಂದುಕೊಡಬಲ್ಲ ಸಸ್ಯವಿದು. ಜೈವಿಕ ವೈವಿಧ್ಯ ಕಾಪಾಡುವ ನಿಟ್ಟಿನಲ್ಲಿ ಅಳಿವಿನಂಚಿನಲ್ಲಿರುವ ಈ ಅಮೂಲ್ಯ ಸಸ್ಯವನ್ನು ಉಳಿಸಿಕೊಳ್ಳಲು ಸುಸ್ಥಿರ ಕೊಯ್ಲು ಮತ್ತು ಸಂರಕ್ಷಣೆ ಅಗತ್ಯವಾಗಿದೆ. ಗೌರಿ ಗಣೇಶ ಹಬ್ಬದ ಫಲಾವಳಿ ಕಟ್ಟುವ ಸಂಪ್ರದಾಯ ಜೀವಂತವಾಗಿರಿಸೋಣ. ವೈವಿಧ್ಯಮಯ ಅಗ್ನಿಶಿಖೆಯನ್ನು ಮುಂದಿನ ಪೀಳಿಗೆಗೆ ಉಳಿಸುವ ಪ್ರತಿಜ್ಞೆ ಮಾಡೋಣ.

**ಕಲಿಹಾರಿ ಸರಾ ಕುಷ್ಠಶೋಫಾರ್ಶೀವ್ರಣಶೂಲಜಿತ್ ॥ಸಾಕ್ಷಾರಾ ಶ್ಲೇಷ್ಮಜಿತ್ತಿಕ್ತಾ ಕಟುಕಾತುವರಾಯಪಿ ಚ | ತೀಕ್ಷ್ಣೋಷ್ಣಾ ಕೃಮಿಹಲಲಧ್ವೀ ಪಿತ್ತಲಾ ಗರ್ಭಪತಿನೀ॥ (ಭಾವಪ್ರಕಾಶ ನಿಘಂಟು ನಲ್ಲಿ ಉಲ್ಲೇಖವಿದು)**

::::::::::::::::::::::::::::::::::::::::::::::::

**ಉಮಾಪತಿ ಭಟ್ಟ ಕೆ ವಿ**
ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು
ಸಮಗ್ರ ವಿಕಾಸ ಟ್ರಸ್ಟ್, ಶಿರಸಿ
ಇಮೇಲ್: